ಶ್ರೀ ಎಂ. ವೀರಪ್ಪ ಮೊಯ್ಲಿ : ಇನ್‌ಸೆಂಟೀವ್ ಪ್ರೊಡಕ್ಷನ್, ಅದರ ವಿಚಾರ ಮಾಡುತ್ತೇವೆ. ಒಂದು ಮಾತು ಏಕಾಂತಯ್ಯನವರಿಗೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸಂವಿಧಾನದ ಹಣಕಾಸಿನ ವ್ಯವಸ್ಥೆಯ ಚೌಕಟ್ಟು ಏನಿದೆ, ಅದನ್ನು ಭದ್ರವಾಗಿ, ಶಿಥಿಲ ಆಗದ ಹಾಗೆ ಕಾಪಾಡಿ ಕೊಳ್ಳಲಿಕ್ಕೆ ಸರಕಾರ ಖಂಡಿತವಾಗಿ ಇನ್ನು ಮುಂದೆ ನಡೆಸಿಕೊಂಡು ಹೋಗುತ್ತದೆ.

ಶ್ರೀ ಬಿ.ಎಸ್. ಬನ್ನಿಕೋಡ್ : ನಾನು ಕೇಳಿದಂಥ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಏನೂ ಹೇಳಲಿಲ್ಲ. ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆ ರೈತರದ್ದು, ಸರಕಾರಕ್ಕೆ ಬರಬೇಕಾದ ಬಡ್ಡಿಪಣವನ್ನು ಮನ್ನಾ ಮಾಡಿ. ಉಳಿದ ಸಕ್ಕರೆ ಕಾರ್ಖಾನೆಗಳಿಗೆ ಲಕ್ಷಾಂತರ ರೂಪಾಯಿ ಹಣವನ್ನು ಕೊಡುತ್ತೀರಿ, ಎಂದು ಕೇಳಿದೆ ಅದಕ್ಕೆ ಅವರು ಏನೂ ಹೇಳಲಿಲ್ಲ. ಉಳಿದ ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ಲಕ್ಷಾಂತರ ರೂಪಾಯಿ ಹಣ ಕೊಟ್ಟಿದ್ದೀರಿ. ಹಾವೇರಿ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಸರಕಾರಕ್ಕೆ ಬರಬೇಕಾದ ಬಡ್ಡಿಯನ್ನು ವೇವ್ ಆಫ್ ಮಾಡಬೇಕೆಂದು ಮನವಿ ಮಾಡಿದ್ದೇನೆ. ಅದನ್ನು ಬಿಡಬೇಕು. ಅದೂ ರೈತರ ಕಾರ್ಖಾನೆ. ಇದು ಕೇವಲ ಸಿಂಬಲ್‌ಗಳಿಂದ ಆಗುವುದಿಲ್ಲ. ಅದು ಹೊರಕ್ಕೆ ಬರಬೇಕು. ಅಂತರಾಳದಿಂದ ದಯವಿಟ್ಟು ಹೇಳಬೇಕು. ಬಡ್ಡಿ ಮನ್ನಾ ಮಾಡಿ, ಸಾಲ ಬೇಡ.

ಶ್ರೀ ಎಂ. ವೀರಪ್ಪ ಮೊಯ್ಲಿ : ಅಂತರಾಳದಿಂದಲೇ ಹೇಳುತ್ತಿದ್ದೇನೆ. ತಾವು ಕೊಟ್ಟ ಸೂಚನೆಯನ್ನು ಬಹಳ ಗಂಭೀರವಾಗಿ ಪರಿಶೀಲನೆ ಮಾಡುತ್ತೇನೆ.

1992-93ನೆಯ ಆರ್ಥಿಕ ವರ್ಷದಲ್ಲಿ ಪೂರಕ ಬೇಡಿಕೆಗಳ ಬಗ್ಗೆ ಪ್ರಸ್ತಾವ

ಅಂಗೀಕಾರ ಪ್ರಸ್ತಾವ

ಮೇಡಂ ಚೇರ್‌ಮನ್ (ಶ್ರೀಮತಿ ದಮಯಂತಿ ಬೋರೇಗೌಡ) : ಪ್ರಸ್ತಾಪ ಏನೆಂದರೆ "31.3.1993ರ ಅಂತ್ಯದೊಳಗೆ ದೊರಕಲಿರುವ ಪೂರಕ ಅಂದಾಜುಗಳ ಎರಡನೆಯ ಕಂತಿನ ಬೇಡಿಕೆಗಳ ಸಂಖ್ಯೆ 1, 2, 5, 7, 13, 14, 15, 19, 20, 25, 27, 29, 31, 36, 39, 41, 43, 47, 48, 49 ಮತ್ತು 50 ಈ ಬೇಡಿಕೆಗಳಿಗೆ ಸಂಬಂಧಿಸಿದಂತೆ ವೆಚ್ಚವನ್ನು ಸಂದಾಯ ಮಾಡಲು ಸರಕಾರಕ್ಕೆ ಅನುಕೂಲವಾಗುವಂತೆ ಪೂರಕ ಅಂದಾಜುಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಮಂಜೂರು ಮಾಡುವುದು"

(ಪ್ರಸ್ತಾವಕ್ಕೆ ಅನುಮೋದನೆ ದೊರಕಿತು ಮತ್ತು ಪೂರಕ ಬೇಡಿಕೆಗಳನ್ನು ಮಂಜೂರು ಮಾಡಲಾಯಿತು)

ಮೇಡಂ ಛೇರ್ಮನ್ : ಈಗ ನಿಯಮ 68ರ ಮೇರೆಗೆ ಒಂದು ಮಹತ್ತರವಾದ ಹಾಗೂ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ ಇದೆ. ಅದನ್ನು ದಯಮಾಡಿ ನಾಳೆ ತೆಗೆದುಕೊಳ್ಳೋಣ.

ಶ್ರೀ ಆರ್.ವಿ. ದೇಶಪಾಂಡೆ : ಆಗಬಹುದು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಮಯ 6-45 ನಿಮಿಷ ಆಗಿದೆ. ನಾವು ಬೆಳಿಗ್ಗೆ 11 ಗಂಟೆಗೆ ಬಂದಿದ್ದೇವೆ. ಇಲ್ಲಿ ಈಗ ಕಣ್ಣು ಮುಚ್ಚಿಕೊಂಡು ಕುಳಿತಿರಬೇಕಾಗಿದೆ. ನಾಳೆ ತೆಗೆದುಕೊಳ್ಳಿ.

ಮೇಡಂ ಛೇರ್ಮನ್ : ಒಂದು ಪ್ರಕಟಣೆ ಇದೆ.

ಪ್ರಕಟಣೆ

ಮೇಡಂ ಚೇರ್‌ಮನ್: ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕಗಳು ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 5-1-1993 ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

1. ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 1992.
2. ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 1992.

ಮಾನ್ಯ ಸದಸ್ಯರ ಗೈರು ಹಾಜರಿಗೆ ಅನುಮತಿ ಕೋರಿಕೆ

ಮೇಡಂ ಚೇರ್‌ಮನ್

ಎರಡನೆಯದು

ವಿಧಾನ ಸಭಾ ಸದಸ್ಯರಾದ ಶ್ರೀ ವೀರೇಂದ್ರ ಪಾಟೀಲರು ದಿನಾಂಕ 1-1-1993ರಂದು ಬರೆದ ಪತ್ರದಲ್ಲಿ ತಮ್ಮ ಈಗಿನ ಆರೋಗ್ಯ ಪರಿಸ್ಥಿತಿಯಿಂದಾಗಿ ದಿನಾಂಕ 29-12-1992ರನ್ನೊರತು ಪಡಿಸಿ, 28-12-1992ರಿಂದ ಪ್ರಾರಂಭವಾದ ಪ್ರಸಕ್ತ ಅಧಿವೇಶನ ಮುಕ್ತಾಯಗೊಳ್ಳುವವರಗೂ ಗೈರು ಹಾಜರಾಗಲು ಅನುಮತಿಯನ್ನು ಕೋರಿರುತ್ತಾರೆ.

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

(ಮಾನ್ಯ ಸದಸ್ಯರಾದ ಶ್ರೀ ವೀರೇಂದ್ರ ಪಾಟೀಲರಿಗೆ ದಿನಾಂಕ 29-12-1992ರನ್ನೊರತುಪಡಿಸಿ ಗೈರು ಹಾಜರಾಗಲು ಅನುಮತಿಯನ್ನು ನೀಡಲಾಯಿತು.)

ಮೇಡಂ ಛೇರ್ಮನ್ : ಸಭೆಯನ್ನು ಈಗ ಮುಂದೂಡಲ್ಪಟ್ಟು ನಾಳೆ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು 6-40 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ಗುರುವಾರ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳುವಂತೆ ನಿಶ್ಚಯಿಸಲಾಯಿತು)

+(ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)